# ಜನ್ನನ ಯಶೋಧರ ಚರಿತೆಯಲ್ಲಿ ದೂದವಿ ಕಲ್ಪಿಸಿದ ಕತೆ

– ಡಾ. ಟಿ.ಡಿ. ರಾಜಣ್ಣ ತಗ್ಗಿ
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ,
ಕಲಬುರಗಿ – 585367

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಅತಿ ಹೆಚ್ಚು ಚರ್ಚೆಗೆ ಒಳಗಾದ ಕೃತಿಗಳಲ್ಲಿ ಯಶೋಧರ ಚರಿತೆಯೂ ಒಂದು. ಇದು ವಿಮರ್ಶಕರಿಗೆ ಭಿನ್ನ ಬಗೆಯ ವಸ್ತು–ಸಾಧ್ಯತೆಗಳನ್ನು ಒದಗಿಸಿದ ಕೃತಿ. ಈ ಕೃತಿಯನ್ನು ಕುರಿತಾಗಿ ಅನೇಕ ಬಗೆಯ ವಿಮರ್ಶೆಗಳು ಬಂದಿರುವುದು ಸರಿಯಷ್ಟೆ. ಮೇಲ್ನೋಟಕ್ಕೆ ಇದು ನಮಗೆ ಲೌಕಿಕ ಕಾವ್ಯವಾಗಿ ಕಾಣಿಸಿದರೂ ಜೈನಧರ್ಮದ ಕೃತಿಯೂ ಕೂಡ.

ಈಗಾಗಲೇ ಆಗಿರುವ ಅನೇಕ ಚರ್ಚೆಗಳಲ್ಲಿ ಬಹುಮುಖ್ಯವಾಗಿ ಅದರಲ್ಲಿನ ಕರ್ಮಸಿದ್ಧಾಂತವನ್ನು ಕುರಿತು, ಇದರಲ್ಲಿ ಚಿತ್ರಿತವಾಗಿರುವ ಭವಾವಳಿಗಳ ಉದ್ದೇಶಗಳನ್ನು ಕುರಿತು, ಅಹಿಂಸಾ ಪ್ರತಿಪಾದನೆಯನ್ನು ಕುರಿತು, ಜೈನಧರ್ಮವು ಸ್ತ್ರೀಯರನ್ನು ಪರಿಭಾವಿಸಿದ ಬಗೆಯನ್ನು ಕುರಿತು, ಅದರಲ್ಲೂ ಅಮೃತಮತಿ ಮತ್ತು ಅಷ್ಟಾವಂಕರ ಕಾಮಸಂಬಂಧದ ಕುರಿತು... ಹೀಗೆ ಅನೇಕ ಬಗೆಯ ವಿಮರ್ಶೆ/ಚರ್ಚೆಗಳಾಗಿವೆ. ಈ ಕೃತಿಯ ಬಗೆಗೆ ಒಟ್ಟಾರೆಯಾಗಿ ಬಂದಿರುವ ವಿಮರ್ಶೆಗಳನ್ನು ಗಮನಿಸಿದರೆ ಬಹುಪಾಲು ವಿಮರ್ಶೆಗಳು ಈ ಕಾಮಸಂಬಂಧದ ಸುತ್ತಲು ಗಿರಕಿ ಹೊಡೆದವುಗಳಾಗಿಯೇ ಕಾಣಿಸುತ್ತವೆ. ಈ ಅನೈತಿಕ ಸಂಬಂಧವನ್ನು ಕುರಿತು ಬಂದಷ್ಟು ವಿಮರ್ಶೆಗಳು ಯಶೋಧರ ಚರಿತೆಯಲ್ಲಿನ ಉಳಿದ ವಿಷಯಗಳ ಕಡೆಗೆ ಬರದೆ ಇರುವುದು ಉಳಿದ ವಸ್ತು–ವಿಷಯ ಆಸಕ್ತಿದಾಯಕವಲ್ಲವೇನೊ ತಿಳಿಯುತ್ತಿಲ್ಲ.

ಈ ಅನೈತಿಕ ಸಂಬಂಧದ ಬಗ್ಗೆ ಬಂದ ಕೆಲವು ವಿಮರ್ಶೆಗಳಲ್ಲಿ ಕೆಲವು ಅಮೃತಮತಿ ಮಾಡಿದ್ದು ಸರಿಯೆಂದೂ ಕೆಲವು ವಿಮರ್ಶೆಗಳಲ್ಲಿ ತಪ್ಪೆಂದೂ ವಾದಿಸಿದ ಅನೇಕ ಉದಾಹರಣೆಗಳು ಸಿಗುತ್ತವೆ. ಕೆಲ ಸ್ತ್ರೀವಾದಿ ಕವಯತ್ರಿಯರಂತೂ ತಮ್ಮ ಕವಿತೆಗಳಲ್ಲಿ ಅಮೃತಿಮತಿಯ ತಪ್ಪಿಗಿಂತ ಆಕೆ ಹಾಗೆ ನಡೆದುಕೊಳ್ಳುವುದಕ್ಕೆ ಕಾರಣನಾದ ಯಶೋಧರನದೇ ತಪ್ಪೆಂದು ಘಂಟಾಘೋಷದ ತೀರ್ಪಿನಂತೆ ಕವಿತೆ ರಚಿಸಿರುವುದು ಕಂಡುಬರುತ್ತದೆ. ಇದೇ ಅರ್ಥದ ಹಿನ್ನೆಲೆಯಲ್ಲಿ ರಚನೆಯಾಗಿರುವ ಯಶೋಧರನ ಸ್ವಗತ ಎನ್ನುವ ನಾಟಕವೂ ಕೂಡ ಯಶೋಧರನೊಳಗೇ ಏನೊ ಲೋಪವಿದೆಯೆಂಬಂತೆಯೇ ಚಿತ್ರಿಸಲಾಗಿದೆ..

ಇಂತಹ ಯಾವುದೇ ವಾದ/ವಿಮರ್ಶೆಗಳ ಮತ್ತು ಸೃಜನಶೀಲ ಕೃತಿಗಳ ಪರ–ವಿರೋಧದ ಚರ್ಚೆಗೆ ಇಳಿಯದೆ ಅಮೃತಮತಿ ಮತ್ತು ಅಷ್ಟಾವಂಕರ ನಡುವಿನ ಸಂಬಂಧವನ್ನು ಬೆಸೆಯುವಲ್ಲಿ ಪಾತ್ರ ವಹಿಸಿದ ದೂದವಿಯ ಪಾತ್ರದ ಹಿನ್ನೆಲೆಯಲ್ಲಿ ಅನೈತಿಕ ಸಂಬಂಧದ ಪೂರ್ವರಂಗದ ಕೆಲ ಮಾಹಿತಿಗಳನ್ನು ಚರ್ಚಿಸುವುದು ಈ ಲೇಖನದ ಉದ್ದೇಶ.

ದೂದವಿಯ ಪಾತ್ರವನ್ನು ಸೂಕ್ಷ್ಮವಾಗಿ ಗಮನಿಸಿದರೆ ಈಕೆ ಅಮೃತಮತಿಯ ಮನಸ್ಸಿಗೆ ಹತ್ತಿರವಾದ ಮತ್ತು ಪ್ರೀತಿಪಾತ್ರಳಾದ ಆಪ್ತಸಖಿ ಎಂಬುದನ್ನು ಜನ್ನನೇ ಹೇಳಿರುವ 'ಮನದನ್ನಳಪ್ಪ ಕೆಳದಿ' ಎಂಬ ಮಾತಿನಿಂದ ಅರಿಯಬಹುದು. ಅಂತೆಯೆ ಇವಳು ರಾಣಿಯ ಅಂತಃಪುರದ ಸೇವಕಿಯೂ ಹೌದು. ಸುದ್ದಿಯನ್ನು ತೆಗೆದುಕೊಂಡು ಹೋಗಿ ಮತ್ತೊಬ್ಬರಿಗೆ ಮುಟ್ಟಿಸುವ ದೂತಿಯೂ ಹೌದು. ಅನೈತಿಕ ಸಂಬಂಧಕ್ಕೆ ಅನಿವಾರ್ಯ ಪಾತ್ರವೂ ಹೌದು. ರಾಣಿಯಾದವಳು ಒಬ್ಬ ಯಕಃಶ್ಚಿತ್ ಕೀಳು ಸೇವಕನೊಂದಿಗೆ ಅನೈತಿಕ ಸಂಬಂಧ ಬೆಳೆಸುವುದನ್ನು ತಪ್ಪಿಸುವ ಆಲೋಚನೆ ಹೊಂದಿರುವವಳು ಕೂಡ. ಈ ರೀತಿ ತಪ್ಪುದಾರಿಯಲ್ಲಿ ಕಾಲಿಡುವವರನ್ನು ಸರಿದಾರಿಗೆ ತರುವುದಕ್ಕೆ ಉಪಾಯವನ್ನು ಬಲ್ಲವಳೂ ಹೌದು, ಒಳಿತು

ಕೆಡುಕುಗಳ ಬಗೆಗೆ ಸರಿಯಾದ ತಿಳುವಳಿಕೆ ಇರುವವಳೂ ಹೌದು. ಆಪ್ತಸಖಿಯಾಗಿ ಗೆದ್ದರೂ ಸೇವಕಿಯಾಗಿ ಸೋತವಳೂ ಕೂಡ.

ಯಶೋಧರ ಚರಿತೆಯಲ್ಲಿ ಸೇವಕಿಯಾಗಿ ಚಿತ್ರಣಗೊಂಡಿರುವ ಈ ದೂದವಿಯ ಪಾತ್ರ ಕೇವಲ ಹನ್ನೆರಡು ಪದ್ಯಗಳಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ಈ ಹನ್ನೆರಡು ಪದ್ಯಗಳಲ್ಲಿ ದೂದವಿಯು ಕಲ್ಪಿಸಿದ ಅದ್ಭುತ ಕತೆಯನ್ನು ಮತ್ತು ಅದನ್ನು ಅಮೃತಮತಿಯ ಮುಂದೆ ಕಟ್ಟಿದ ಬಗೆಯನ್ನು ಗಮನಿಸಿದಾಗ ದೂದವಿಯ ಪಾತ್ರದ ವಿಶಿಷ್ಟತೆ ಮತ್ತು ಮಹತ್ವದ ಅರಿವಾಗುತ್ತದೆ.

ಈ ದೂದವಿ ಕಲ್ಪಿಸಿದ ಕತೆಯೇನು ? ಹಾಗೆ ಕಲ್ಪಿಸಿದ ಕತೆಯಲ್ಲಿ ಸತ್ಯವೆಷ್ಟಿದೆ ? ಸುಳ್ಳೆಷ್ಟಿದೆ ? ಈ ಕತೆಯನ್ನು ಯಾಕೆ ಕಲ್ಪಿಸಬೇಕಾಯಿತು ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದರ ಮೂಲಕ ಯಶೋಧರ ಚರಿತೆಯ ಮತ್ತೊಂದು ಮಜಲನ್ನು ಪರಿಚಯ ಮಾಡಿಕೊಳ್ಳಬಹುದು.

ದೂದವಿ ಕಲ್ಪಿಸಿದ ಕತೆಯ ಬಗೆಗೆ ಚರ್ಚಿಸುವುದಾದರೆ ಯಶೋಧರನ ಜೊತೆಯಲ್ಲಿ ಮಲಗಿದ್ದ ಅಮೃತಮತಿಯು ನಡುರಾತ್ರಿಯಲ್ಲಿ ಕೇಳಿಬಂದ ಇಂಪಾದ ರಾಗವೊಂದಕ್ಕೆ ಮನಸೋತು ಹಾಡಿದ ವ್ಯಕ್ತಿಯನ್ನು ನೋಡುವ ಆಸೆಯನ್ನು ವ್ಯಕ್ತಪಡಿಸುವುದು ಕಂಡುಬರುತ್ತದೆ. 'ಬಿನದಕೆ ಪಾಡುತಿರೆ ಆ ನುಣ್ದನಿ ನಿದ್ರೆಗೆ ಕತಕಬೀಜಮಾಯ್ತೆನೆ ಮೃಗಲೋಚನೆ ತಿಳಿದಾಲಿಸಿ ಮುಟ್ಟಿದ ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್' ಎಂಬ ಮಾತುಗಳಲ್ಲಿ ಆಕೆಯ ಕದಡಿದ್ದ ಮನಸ್ಸು ತಿಳಿಗೊಂಡ ಬಗೆ ಮತ್ತು ತನ್ನ ಮನಸ್ಸನ್ನು ಉಡುಗೊರೆಯನ್ನಾಗಿ ಕೊಡುವುದು ಕಂಡುಬಂದರೆ, ನಂತರ 'ನೋಡುವ ಕೂಡುವ ಚಿಂತೆ ಕಡಲ್ವರಿದುದಂದು ಬೆಳಗಪ್ಪಿನೆಗಂ' ಎಂಬ ಮಾತುಗಳಲ್ಲಿ ಅವಳ ಆಸೆ ಮತ್ತು ಬಯಕೆಗಳು ಅಭಿವ್ಯಕ್ತವಾಗಿರುವುದು ಗೋಚರವಾಗುತ್ತದೆ.

ಈ ಆಸೆಯನ್ನು ನೆರವೇರಿಸಿಕೊಳ್ಳಲು ಅಮೃತಮತಿ ಬಳಸಿಕೊಳ್ಳುವ ಪಾತ್ರವೇ ತನ್ನ ಆಪ್ತಸಖಿಯಾದ ಈ ದೂದವಿ. ಈಕೆ ಈ ಮೊದಲು ತಿಳಿಸಿದಂತೆ ಆಪ್ತಸಖಿಯೂ ಹೌದು, ಆಪ್ತಸೇವಕಿಯೂ ಹೌದು. ಅಮೃತಮತಿಯು ಈ 'ಮನದನ್ನಳಪ್ಪ ಕೆಳದಿಗೆ ಮನಮಂ ಮುಂದಿಟ್ಟು...' ಅಷ್ಟಾವಂಕನ ಜೊತೆ ಸಂಬಂಧಕ್ಕಾಗಿ ಸಹಾಯ ಕೋರುವುದು ಒಬ್ಬ ರಾಣಿಯ ಆದೇಶದಂತೆ... ದೂದವಿ ಅಷ್ಟಾವಂಕನನ್ನು ನೋಡಿಕೊಂಡು ಬರುವುದಕ್ಕೆ ಹೋಗುವುದು ಒಬ್ಬ ಸೇವಕಿಯಾಗಿಯೇ ಹೊರತು ಆಪ್ತ ಗೆಳತಿಯಾಗಿ ಅಲ್ಲವೆಂಬುದು ಮುಂದಿನ ಮಾತುಗಳಿಂದ ತಿಳಿದುಬರುತ್ತದೆ.

ಅಮೃತಮತಿಯು ಸೂಚಿಸಿದ ವ್ಯಕ್ತಿಯನ್ನು ಗಮನಿಸಿದ ದೂದವಿಯ ಬಾಯಿಂದ ಹೊರಟ 'ಕಣ್ಣಂ ಮನಕ್ಕಂ ಉದ್ಗಾರಂಬೆತ್ತು ಭೋಂಕನೆ ಮಗುಳ್ದಳ್' ಎಂಬ ಉದ್ಗಾರದಲ್ಲಿ ದೂದವಿಯು ಅಷ್ಟಾವಂಕನ ಸೌಂದರ್ಯದ ಬಗ್ಗೆ ಕನಿಷ್ಠ ಅಭಿಪ್ರಾಯ ವ್ಯಕ್ತಪಡಿಸಬೇಕೆಂಬುದೂ ಮತ್ತು ರಾಣಿಯಾದ ಅಮೃತಮತಿಯು ಒಬ್ಬ ಯಕಶ್ಚಿತ್ ಕೀಳು ಸೇವಕನೊಂದಿಗೆ ಸಂಬಂಧವನ್ನು ಬೆಳೆಸಿ ನೀತಿಬಾಹಿರ ಕೆಲಸಕ್ಕೆ ಅವಕಾಶವೀಯದ ಪೂರ್ವಸಿದ್ಧತೆಯಿರುವುದೂ ಕಂಡುಬರುತ್ತದೆ.

ಹಾಗಾಗಿ ದೂದವಿ ತನ್ನ ಆಪ್ತಸಖಿಯ ಈ ನೈತಿಕ ಪತನವನ್ನು ತಡೆಯುವ ಉದ್ದೇಶದಿಂದ ತನಗಾಗಿ ಮತ್ತು ತಾನು ತರುವ ಸುದ್ದಿಗಾಗಿ ಕಾತರದಿಂದ ಎದುರು ನೋಡುತ್ತಿದ್ದ ಅಮೃತಮತಿಗೆ ವ್ಯಂಗ್ಯದಿಂದ ಕೆಲ ಮಾತುಗಳನ್ನು ಹೇಳುತ್ತಾಳೆ. ಇದು ಅಮೃತಮತಿಯ ಮನಸ್ಸನ್ನು ನೀತಿಬಾಹಿರ ಕ್ರಿಯೆಯ ಕಡೆಗೆ ಹೊರಳದಂತೆ ತಡೆಯುವ ಸಲುವಾಗಿ ಒಬ್ಬ ನಿಜ ಗೆಳತಿಯು ಮಾಡಬಹುದಾದ ಪ್ರಕ್ರಿಯೆಯಂತೆ ತೋರುತ್ತದೆ. ಅಲ್ಲದೆ ಕೆಲ ಅಜಗಜಾಂತರ ಹೋಲಿಕೆಗಳ ಮೂಲಕ ಸಂಬಂಧ ಯೋಗ್ಯವಲ್ಲವೆಂಬ ಕಲ್ಪನೆಯನ್ನು ಉಂಟುಮಾಡುವುದಕ್ಕಾಗಿಯೇ ಅಮೃತಮತಿಯ ಸೌಂದರ್ಯದ ಬಗ್ಗೆ ಹೆಚ್ಚುಗಾರಿಕೆಯ ಮಾತುಗಳನ್ನೂ ಅಷ್ಟಾವಂಕನ ಸೌಂದರ್ಯದ ಬಗ್ಗೆ ಕೊಂಕು ಮತ್ತು ಕನಿಷ್ಠ ಮಾತುಗಳನ್ನಾಡುವುದು ಕಂಡುಬರುತ್ತದೆ. ಆದರೂ ಕಾಮವಿಕಾರತೆಯಲ್ಲಿ ಮುಳುಗಿದ್ದ ಅಮೃತಮತಿಗೆ ದೂದವಿಯ 'ಇಂತಪ್ಪ

ಕಾಮದೇವಂಗೆ ಎಂತೊಲಿದೆ' ಎಂಬ ವ್ಯಂಗ್ಯದ ಮಾತುಗಳೂ ಧನಾತ್ಮಕ ಮಾತುಗಳಾಗಿಯೇ ಕೇಳಿಬರುತ್ತವೆ. ಹಾಗಾಗಿಯೇ ಅಮೃತಮತಿ ಕುತೂಹಲ ತಡೆಯಲಾರದೆ 'ಪೇಳ್ ಪೇಳ್ ಕಾದಲನಂತಿರೆ, ಚೆಲ್ವನೆ ದೂದವಿ ನೀನೆನ್ನ ಕೊಂದೆ' ಎಂಬ ಮಾತಿನಲ್ಲಿ ಅವಳು ಅನೈತಿಕ ಸಂಬಂಧಕ್ಕೆ ಹಾತೊರೆಯುವ ಕಾತುರದ ಜೊತೆಗೆ, ತಾನು ಒಲಿದ ಪುರುಷನು ಅತ್ಯಂತ ಸುಂದರನಿರಬಹುದೆಂಬ ಸೌಂದರ್ಯಪ್ರಜ್ಞೆಯೂ ವ್ಯಕ್ತವಾಗುತ್ತದೆ..

ಆದರೂ ದೂದವಿ ಒಬ್ಬ ಗೆಳತಿಯಾಗಿ ತನ್ನ ಸಖಿಯ ನೈತಿಕ ಪತನವೆಂದರೆ ಅದು ತನ್ನ ಪತನವೂ ಹೌದೆಂಬಂತೆ ಭಾವಿಸಿ, ಜಗತ್ತಿನಲ್ಲಿ ಯಾವ ವ್ಯಕ್ತಿಯಲ್ಲೂ ಇಲ್ಲದ ಕುರೂಪತೆಯನ್ನು ವ್ಯಂಗ್ಯದಿಂದಲೂ ಕನಿಷ್ಠವಾಗಿಯೂ ವರ್ಣಿಸಿ ಹೇಳುತ್ತಾಳೆ. ಹೀಗೆ ದೂದವಿಯು ಅಷ್ಟಾವಂಕನ ಕುರೂಪದ ವರ್ಣನೆಯನ್ನು ಮಾಡಿದ ಸಂಗತಿಗಳೆಲ್ಲವೂ ಆಕೆಯೇ ಸೃಷ್ಟಿಸಿದ ಕಟ್ಟುಕತೆ. ಯಾಕೆಂದರೆ ಆಕೆ ಮಾಡಿದ ವರ್ಣನೆಗಳನ್ನು ಗಮನಿಸಿದಾಗ ಅವು ಇದೇ ಯಶೋಧರ ಚರಿತೆಯಲ್ಲಿನ ಕೆಲ ಸನ್ನಿವೇಶಗಳಿಗೆ ಹೋಲಿಸಿದಾಗ ತಾಳೆಯಾಗುವುದಿಲ್ಲ. ಅದೂ ಅಲ್ಲದೆ ಯಾವುದೇ ವ್ಯಕ್ತಿಗೆ ಎಷ್ಟೇ ಲೋಪಗಳಿದ್ದಾಗ್ಯೂ ದೂದವಿ ವರ್ಣಿಸಿದಷ್ಟು ಸರ್ವಾಂಗಗಳಲ್ಲೂ ಲೋಪಗಳಿರಲು ಸಾಧ್ಯವೇ ಇಲ್ಲ.

ಪಳಿದಲೆ, ಕುಳಿನೊಸಲಳಿಗ
ಣ್ಣೊಳೆವಾಯ್ ಹಪ್ಪಳಿಕೆಮೂಗು ಮುರುಟಿದ ಕಿವಿ
ಬಿಬ್ಬಿರುವಲ್ ಕುಸಿಗೊರಲಿಳಿದೆರ್ದೆ
ಪೊರಂಟ ಬೆನ್ ಬಾತಬಸಿರಡಂಗಿದ ಜಘನ

ಕರಿದೊವಲ ಪಳೆಯ ಕುಳಿಯಂ
ತೆರೆದಂದದ ಮೆಯ್ಯನಾತಮಾತನ ಕಯ್ಗಳ್
ಕುರುಗಣ್ ಕೂನ್‌ಬೆನ್ ಕಾಲ್
ಮರೆಯಿಸುವುದು ಟೊಂಕಮುರಿದ ಕತ್ತೆಯ ಕಾಲಂ

ಮುದುಗರಡಿಯ ಮುದುದೊವಲಂ
ದದ ಕರಿಯ ತಾಳಕಾಯ ಮೋಳಿಗೆಯೊಂದಂ
ದದ ಮುರುಡನಷ್ಟವಂಕಂ
ಮೊದಲೊಣಗಿದ ಕೂನ ಗೊರಡಿನಂದದ ಕೊಂಕಂ

ಇದೊಂದು ಅಸಹ್ಯ ಮತ್ತು ಅತಾರ್ಕಿಕ ವರ್ಣನೆ. ಮನುಷ್ಯನ ದೇಹದ ಯಾವ ಭಾಗಗಳೂ ಸಹಜವಿಲ್ಲವೆಂಬಂತೆ ವರ್ಣಿಸಿರುವ ಪರಿ ಊಹೆಗೂ ನಿಲುಕದ್ದು. ಜಗತ್ತಿನ ಮನುಷ್ಯ ಸೃಷ್ಟಿಯಲ್ಲಿ ಇಷ್ಟೊಂದು ವಿಕಾರತೆಯ ಕುರೂಪವಿರಲು ಸಾಧ್ಯವೇ ಇಲ್ಲ. ವಿರೂಪಕ್ಕೂ, ವಿಕಾರತೆಗೂ ಒಂದು ಮಿತಿಯಿರುತ್ತದೆ.

ಈ ವಿಕಾರತೆಯನ್ನು ಗಮನಿಸಿದಾಗ ಇದೊಂದು ಉತ್ಪ್ರೇಕ್ಷಿತ ಕತೆಯೆಂಬುದು ಮೇಲ್ನೋಟಕ್ಕೇ ಗೊತ್ತಾಗುತ್ತದೆ. ಅದರ ಜೊತೆಗೆ ರಾಜಾಸ್ಥಾನದಲ್ಲಿನ ಅಷ್ಟಾವಂಕನ ಸ್ಥಾನ ಮತ್ತು ಅವನ ಕರ್ತವ್ಯಗಳ ಜೊತೆ ಹೋಲಿಸಿದಾಗ ಇದೊಂದು ಶುದ್ಧ ಕಲ್ಪಿತ ಕಟ್ಟುಕತೆ ಎಂಬುದು ಮನವರಿಕೆಯಾಗುತ್ತದೆ.

ಇದು ಕಲ್ಪಿತ ಎಂಬುದಕ್ಕೆ ಮುಖ್ಯವಾಗಿ ನಾವು ಗಮನಿಸಬೇಕಾದ ಅಂಶಗಳೆಂದರೆ : ಅಷ್ಟಾವಂಕ ರಾಜನ ಆಸ್ಥಾನದಲ್ಲಿ ಪಟ್ಟದಾನೆಯ ಸೇವಕನಾಗಿರುವುದು. (ಜನ್ನನೇ ಹೇಳಿರುವಂತೆ ಅವನು ಪಟ್ಟದಾನೆಯ ಬದಗ, ದಂತಿಪ...) ಮುಖ್ಯವಾಗಿ ಗಮನಿಸಬೇಕಾದ್ದು 'ದಂತಿಪ' ಎಂಬ ಶಬ್ದವನ್ನು. ಇದರ ಅರ್ಥ ಪಟ್ಟದಾನೆಯನ್ನು ಪಳಗಿಸುವ, ಪಾಲಿಸುವವ ಅಥವಾ ನೋಡಿಕೊಳ್ಳುವ ವ್ಯಕ್ತಿ ಎಂದು. ಅಂಥ ವ್ಯಕ್ತಿಗೆ ಇಷ್ಟೊಂದು ವಿಕಾರಗಳಿದ್ದರೆ ಆನೆಯ ಪಳಗಿಸುವುದು ಮತ್ತು ನಿಯಂತ್ರಿಸುವುದು ಸಾಧ್ಯವಿಲ್ಲದ ಮಾತು.

ನಡೆಯುವುದಕ್ಕೂ ಕಷ್ಟಪಡುವ (ಟೊಂಕ ಮುರಿದ ಕತೆಯ ಕಾಲೂ ಕೂಡ ಮೇಲು ಎಂಬಂತಿರುವ) ಈತ ಪಟ್ಟದಾನೆಯ ಆಗುಹೋಗುಗಳನ್ನು ನೋಡಿಕೊಳ್ಳಲು ಸಾಧ್ಯವಿಲ್ಲ. ವಾಸ್ತವ ಎಂದರೆ ಅವನು ಪಟ್ಟದಾನೆಯ ಸೇವಕ ಎಂಬುದು ನಿಜಸಂಗತಿ. ಹಾಗಾಗಿಯೇ ಅವನ ದೇಹ ಸಹಜವಾದುದು ಮತ್ತು ಸದೃಢವಾದುದು. ದೂದವಿ ವರ್ಣಿಸಿದಷ್ಟು ವಿಕಾರವಾದದ್ದಲ್ಲ. ಅಷ್ಟೊಂದು ವಿಕಾರತೆಗಳಿದ್ದರೆ ಅವನು ಸೇವಕನಾಗಲಾರ. ಹಾಗಾಗಿ ದೂದವಿ ಇಲ್ಲಿ ಅಮೃತಮತಿಗೆ ಉತ್ಪ್ರೇಕ್ಷಿತ ವರ್ಣನೆ ಮಾಡಿದ್ದಾಳೆ. ಅವನ ಕೈ-ಕಾಲುಗಳು ಸೊಂಟಮುರಿದ ಕತ್ತೆಯ ಕಾಲನ್ನೂ ಮರೆಯಿಸುವುದು ಎಂಬುದೇ ನಿಜವಾದರೆ ಮುಂದೆ ಅಮೃತಮತಿಯು ಯಶೋಧರನಿಂದ ಬಿಡಿಸಿಕೊಂಡು ಅಷ್ಟಾವಂಕನ ಬಳಿಗೆ ಸ್ವಲ್ಪ ತಡವಾಗಿ ಬಂದಾಗ ತನ್ನ ಬೀಟೆಯ ಕಾಲಿನಿಂದ ಬಾಸುಂಡೆಗಳೇಳುವಂತೆ ಒದೆಯಲಾರ. ಅವಳ ದಪ್ಪನೆಯ ಜಡೆಯನ್ನು ಹಿಡಿದು ಒಕ್ಕಲಿಗ ನಾರನ್ನು ಬಡಿಯುವಂತೆ ಬಡಿಯಲಾರ. ಅವನು ಹೊಡೆದದ್ದು, ಒದ್ದದ್ದು ನಿಜವೇ ಆಗಿರುವುದರಿಂದ ಶಾರೀರಿಕ ಬಲವುಳ್ಳವನು ಮತ್ತು ಅವನ ಕೈ-ಕಾಲುಗಳು ಸಹಜ ರೀತಿಯಲ್ಲಿದ್ದವು. ಈ ಸಂದರ್ಭದಲ್ಲಿ ದೂದವಿ ಹೇಳಿದ್ದು ಕಟ್ಟುಕತೆ ಎನ್ನುವುದಕ್ಕೆ ಮತ್ತಾವ ನಿದರ್ಶನಗಳೂ ಬೇಕಾಗುವುದಿಲ್ಲ.

ಮತ್ತೊಂದು ಅಂಶವೆಂದರೆ ದೂದವಿಯು ಅಮೃತಮತಿಯ ಆದೇಶದ (ಕೋರಿಕೆ) ಮೇರೆಗೆ ಅಷ್ಟಾವಂಕನ ಬಳಿಗೆ ಹೋದಾಗ 'ಕಣ್ಗಂ ಮನಕ್ಕಂ ಉದ್ಗಾರವೆತ್ತು ಘೋಂಕನೆ ಮಗುಳ್ದಳ್' ಎಂಬುದನ್ನು ಗಮನಿಸಬೇಕು. ಇಲ್ಲಿ ದೂದವಿ ಅವನ ಕುರೂಪತೆಗಳನ್ನು ಗಮನಿಸದೆಯೆ ಅಲ್ಲಿಂದ ತಕ್ಷಣವೇ ಹಿಂದಿರುಗಿದಳು ಎಂಬ ಮಾತಿದೆ. ಹಾಗೆ ದೂದವಿಯು ಅಷ್ಟಾವಂಕನ ಬಳಿಯಿಂದ ತಕ್ಷಣವೇ ಹಿಂದಿರುಗಿದ್ದರೆ ದೂದವಿ ಹೇಳಿದ ಅಷ್ಟೊಂದು ವಿಕಾರತೆಗಳನ್ನು ಗಮನಿಸಿರಲು ಸಾಧ್ಯವೇ ಇಲ್ಲ. ಏಕೆಂದರೆ ದೂದವಿ ವರ್ಣಿಸಿದ ಆ ಕುರೂಪದ ವರ್ಣನೆಯ ಅಷ್ಟೂ ಸಂಗತಿಗಳನ್ನು ಗಮನಿಸುವುದಕ್ಕೆ ಕನಿಷ್ಠ ಅರ್ಧ ಗಂಟೆಯಾದರೂ ಬೇಕಾಗುತ್ತದೆ. ಏಕೆಂದರೆ ಅಷ್ಟಾವಂಕನ ಕುರೂಪತೆಯನ್ನು ಅವನ ದೇಹದ ಎಲ್ಲ ಕಡೆ ಅಂದರೆ ಹಿಂಭಾಗ ಮುಂಭಾಗ ಮತ್ತು ಅಡಿಯಿಂದ ಮುಡಿಯವರೆಗೂ ಗಮನಿಸಿದಂತೆ ವರ್ಣನೆಯಿದೆ. ಹೀಗೆ ಅವನ ದೇಹದ ಹಿಂಭಾಗ ಮತ್ತು ಮುಂಭಾಗದ ಕುರೂಪಗಳನ್ನು ಖುದ್ದಾಗಿ ಗಮನಿಸಿ ಕಣ್ಣಿಗೆ ಕಟ್ಟಿದಂತೆ ವರ್ಣನೆ ಮಾಡಿದ್ದಾಳೆಂದರೆ ದೂದವಿಯು ಅಷ್ಟಾವಂಕನನ್ನು ನಖಶಿಖಾಂತ ನೋಡಬೇಕು ಮತ್ತು ಅವನನ್ನು ಸುತ್ತುವರೆದು ಗಮನಿಸಬೇಕು. ಇದನ್ನು ದೂದವಿ ಮಾಡಿರಲಾರಳು. ಏಕೆಂದರೆ ದೂದವಿಯೇ ವರ್ಣಿಸುವಂತೆ 'ಪಳೆಯ ಕುಳಿಯಂ ತೆರೆದಂದದ ಮೈಯನಾತಂ' ಎಂಬ ಮಾತುಗಳಲ್ಲಿ ಅವನ ಮೈಯಿಂದ ಅಂಥದ್ದೊಂದು ದುರ್ಗಂಧ ಬರುತ್ತಿದ್ದರೆ ದೂದವಿ ಅಲ್ಲಿ ಒಂದೆರಡು ಕ್ಷಣಕ್ಕಿಂತ ಹೆಚ್ಚಿಗೆ ಇದ್ದಿರಲಾರಳು. ಮುಂದೆ ಅಮೃತಮತಿಯೂ ಕೂಡ ಹಗಲೂ ರಾತ್ರಿ ಅವನೊಂದಿಗೆ ಕಾಮಸಂಬಂಧದಲ್ಲಿ ಕಳೆಯಲು ಸಾಧ್ಯವಾಗುತ್ತಿರಲಿಲ್ಲ. ದೂದವಿ ಅಲ್ಲಿಯೇ ಇದ್ದು ಅವನ ದೇಹವನ್ನು ಅಡಿಯಿಂದ ಮುಡಿಯವರೆಗೆ ಇಂಚಿಂಚಾಗಿ ಗಮನಿಸಿದ್ದಾಳೆಂದರೆ ಅವನ ಮೈಯಿಂದ ಅಂಥದ್ದೊಂದು ನಾತ ಬರುತ್ತಿರಲಿಲ್ಲ ಎಂಬುದು ಒಪ್ಪಿಕೊಳ್ಳಬೇಕಾಗುತ್ತದೆ. ಹಾಗಾಗಿ ದೂದವಿ ಹೇಳಿದ್ದು ಕಟ್ಟು ಕತೆ.

ಇನ್ನೊಂದು ಅಂಶವೆಂದರೆ, ಅಮೃತಮತಿ ಅಷ್ಟಾವಂಕನಿಗೆ ಒಲಿಯಲು ಕಾರಣವಾದ ಸಂದರ್ಭ. ಅದೆಂದರೆ ಅಷ್ಟಾವಂಕನ ಇಂಪಾದ ಹಾಡು. 'ಬಿನದಕೆ ಪಾಡುತಿರೆ ನುಣ್ಣನಿ...' ಇಲ್ಲಿ ಅಷ್ಟಾವಂಕನ ಹಾಡು ಇಂಪಾದುದೇ ಆಗಿದ್ದರೆ, ಮೈನವಿರೇಳುವಂತೆ ಆಕರ್ಷಿಸುವುದೇ ಆಗಿದ್ದರೆ ದೂದವಿ ವರ್ಣಿಸಿದ 'ಬಿಬ್ಬಿರುವಲ್ ಮತ್ತು ಕುಸಿಗೊರಲ್' ಎಂಬ ಮಾತುಗಳು ಸುಳ್ಳಾಗುತ್ತವೆ. ಆಕೆ ವರ್ಣನೆ ಮಾಡಿದ್ದು ನಿಜವಾದರೆ ಅವನ ಹಾಡು ಅಷ್ಟು ಇಂಪಾಗಿರಲು ಸಾಧ್ಯವಿಲ್ಲ. ಆ ಹಾಡು ಇಂಪಾಗಿ ಇದ್ದುದಕ್ಕೆ ಅಮೃತಮತಿ ಆ ಹಾಡಿಗೆ ಮನಸೋತಿರುವುದು. ಹಾಗಾಗಿ ಅವನ ಹಲ್ಲುಗಳಾಗಲಿ, ಅವನ ಕಂಠವಾಗಲಿ ದೂದವಿ ವಣಿಸಿದಷ್ಟು ವಿಕಾರವಾದವುಗಳಲ್ಲ.

ಮತ್ತೊಂದು ಅಂಶವೆಂದರೆ ಏಕಕಾಲದಲ್ಲಿ ಗೂನುಬೆನ್ನು ಮತ್ತು ಉಬ್ಬಿದ ಹೊಟ್ಟೆ ಒಟ್ಟಿಗೆ ಇರಲು ಸಾಧ್ಯವಿಲ್ಲ. ಅವನು ಗೂನು ಬೆನ್ನಿನವನಾದರೆ ಅವನು ಮುಂದಕ್ಕೆ ಬಾಗಬೇಕು. ಮುಂದಕ್ಕೆ ಬಾಗುವುದಕ್ಕೆ ಹೊಟ್ಟೆ ಅಡ್ಡ ಬರುತ್ತದೆ. ಅವನು ಗೂನು ಬೆನ್ನಿನವನೇ ಆದರೆ ಅವನಿಗೆ ಬಾತಬಸಿರ್ ಇಲ್ಲ. ಅವನಿಗೆ ಬಾತ ಬಸಿರ್ ಇದ್ದುದೇ ಆದರೆ ಅವನ ಬೆನ್ನು ಬಾಗುವುದಿಲ್ಲ. ಹಾಗಾಗಿ ಅವನು ಗೂನು ಬೆನ್ನಿನವನಲ್ಲ. ಈ ಕಾರಣಗಳಿಂದಲೂ ದೂದವಿಯ ವರ್ಣನೆಯು ಶುದ್ಧ ಕಟ್ಟುಕತೆ ಎಂಬುದು ಗೊತ್ತಾಗುತ್ತದೆ.

ಇದರ ಜೊತೆಗೆ ಮತ್ತೊಂದು ಅಂಶವೆಂದರೆ ಯಾವುದೇ ಹೆಣ್ಣಿಗೆ ಅಲ್ಪಸ್ವಲ್ಪ ಪ್ರಮಾಣದ ಸೌಂದರ್ಯಪ್ರಜ್ಞೆ ಇದ್ದೇ ಇರುತ್ತದೆ. ಅಂಥ ಸೌಂದರ್ಯ ಪ್ರಜ್ಞೆ ಮತ್ತು ದೇಹ ದಾರ್ಢ್ಯತೆಯ ಬಗ್ಗೆ ಅಭಿಮಾನವೂ ಇರುತ್ತದೆ. ಇಲ್ಲಿ ಬಣ್ಣ ಮುಖ್ಯವಾಗುವುದಿಲ್ಲ. ಆದರೆ ದೇಹದ ಸದೃಢತೆ ಪ್ರಾಮುಖ್ಯತೆ ಪಡೆಯುತ್ತದೆಂಬುದನ್ನು ಮರೆಯಬಾರದು. ಅಮೃತಮತಿಯು ಒಬ್ಬ ರಾಣಿಯಾಗಿದ್ದುಕೊಂಡು ಇಷ್ಟೊಂದು ವಿಕಾರ ಮನುಷ್ಯನೊಂದಿಗೆ ಸಂಬಂಧ ಇಟ್ಟುಕೊಳ್ಳುವುದು ಅವಳಿಗೂ ಅವಮಾನಕರವೇ ಆಗಿರುತ್ತದೆ. ಆಕೆಯೂ ಸೌಂದರ್ಯವನ್ನು ಆರಾಧಿಸುವವಳು ಮತ್ತು ಇಷ್ಟಪಡುವವಳು ಎಂಬುದಕ್ಕೆ ಆಕೆಯ ಮಾತುಗಳೇ ಸಾಕ್ಷಿ. ದೂದವಿ ಅಷ್ಟಾವಂಕನನ್ನು ನೋಡಿಕೊಂಡು ಬರುವಾಗ ಎದುರು ನೋಡುತ್ತಿದ್ದ ಅಮೃತಮತಿಗೆ ವ್ಯಂಗ್ಯದಿಂದ 'ಇಂತಪ್ಪ ಕಾಮದೇವಂಗೆ ಎಂತಾಯ್ದರಸಿ ಕೂರ್ತೆಯೆಂದಾನರಿಯೆಂ' ಎಂದಾಗ ಅಮೃತಮತಿಯ 'ಪೇಳ್ ಪೇಳ್ ಕಾದಲನೆ, ಚೆಲ್ವನೆ' ಎಂಬ ಕುತೂಹಲದ ಮಾತುಗಳಲ್ಲಿ ಅವಳ ಸೌಂದರ್ಯ ಪ್ರಜ್ಞೆಯೂ ವ್ಯಕ್ತವಾಗಿದೆ. ಅದೂ ಅಲ್ಲದೆ ದೂದವಿ ಅಷ್ಟಾವಂಕನ ವರ್ಣನೆಯನ್ನು ಕನಿಷ್ಠವಾಗಿ ವರ್ಣಿಸಿದಾಗ ಅವಳ ನಿರಾಸೆಯೂ ಮತ್ತು ಅವಳ ಗದ್ಗದಿತ ಕೊರಳಿನ ದನಿ ಮತ್ತು ಕಣ್ಣೀರುಗಳು ಅವಳಿಗಿದ್ದ ಸೌಂದರ್ಯ ಪ್ರಜ್ಞೆಯನ್ನು ಪ್ರತಿಪಾದಿಸುತ್ತವೆ. ಅಂತೆಯೆ ಅಕ್ಕಮಹಾದೇವಿಯೂ ಕೂಡ ತಾನು ಆಧ್ಯಾತ್ಮಿಕ ಗಂಡನನ್ನು ಹುಡುಕಿಕೊಳ್ಳುವಾಗಲೂ ಆಕೆಗೂ ಸೌಂದರ್ಯದ ಪ್ರಜ್ಞೆ ಇತ್ತೆಂಬುದಕ್ಕೆ 'ಸಾವಿಲ್ಲದ ಕೇಡಿಲ್ಲದ, ರೂಹಿಲ್ಲದ ಚೆಲುವಂಗೆ ಆನೊಲಿದೆ..' ಎಂಬ ಮಾತುಗಳಿಂದ ಅರಿಯಬಹುದು. ಇತ್ತ ಅಮೃತಮತಿ 'ಪೊಲ್ಲಮೆಯೆ ಲೇಸು ನಲ್ಲರ ಮೈಯೊಳ್' ಎಂದು ಎಷ್ಟೇ ಹೇಳಿದರೂ ದೂದವಿ ಹೇಳಿದಷ್ಟು ಪೊಲ್ಲಮೆಗಳು ಅಷ್ಟಾವಂಕನಲ್ಲಿರಲಿಲ್ಲ ಎಂಬುದು ಒಪ್ಪಿಕೊಳ್ಳಬೇಕು. ಏಕೆಂದರೆ ಯಾವ ಹೆಣ್ಣೂ ಇಷ್ಟೊಂದು ವಿಕಾರ ರೂಪನನ್ನು ಮೆಚ್ಚುವುದಿಲ್ಲ. ಅಷ್ಟೊಂದು ವಿಕಾರದ ವ್ಯಕ್ತಿಯೊಂದಿಗೆ ಸಂಬಂಧ ಬೆಳೆಸುವಂತಹ ಲೈಂಗಿಕ ಅತೃಪ್ತಿಯೂ ಅವಳಲ್ಲಿರಲಿಲ್ಲ ಎಂಬುದು ಯಶೋಧರ ಚರಿತೆಯಿಂದಲೇ ಗೊತ್ತಾಗುತ್ತದೆ. ಹಾಗಾಗಿ ಅಮೃತಮತಿ ಒಬ್ಬ ಸಹಜವಾದ ಮತ್ತು ಸದೃಢವಾದ ವ್ಯಕ್ತಿಯೊಂದಿಗೇ ಸಂಬಂಧ ಬೆಳೆಸಿದ್ದಾಳೆ ಎನ್ನಬಹುದು.

ಇವೆಲ್ಲ ಅಂಶಗಳು ಪರಸ್ಪರ ಒಂದೊಂದು ವಿರೋಧಭಾಸ ಉಂಟುಮಾಡುವಂತಿರುವುದರಿಂದ ದೂದವಿ ಅಮೃತಮತಿಗೆ ಕಲ್ಪಿಸಿದ ಕತೆಯನ್ನು ಹೇಳಿದ್ದಾಳೆಂದು ಅರ್ಥವಾಗುತ್ತದೆ. ದೂದವಿಗೆ ಈ ರೀತಿ ಕಲ್ಪಿಸಿ ಕತೆ ಹೇಳಬೇಕಾದ ಅನಿವಾರ್ಯತೆ ಏನಿತ್ತು ? ಎಂಬ ಪ್ರಶ್ನೆಗೆ ಬಂದರೆ, ಮುಖ್ಯವಾಗಿ ಅಮೃತಮತಿಯ ಆಪ್ತಸಖಿ ಈ ದೂದವಿ ಎಂಬುದನ್ನು ಮೊದಲಿಗೆ ನೆನಪಿಸಿಕೊಳ್ಳಬೇಕು. ಯಾವ ಗೆಳೆಯ ಗೆಳತಿಯೂ ಯೋಗ್ಯವಲ್ಲದ ಸಂಬಂಧದಲ್ಲಿ ಮುಳುಗುತ್ತಾರೆಂದು ಗೊತ್ತಾದರೆ ಅದನ್ನು ಸುಲಭವಾಗಿ ತಪ್ಪಿಸುವ ಉಪಾಯ ಯಾವುದೆಂದು ಹುಡುಕುತ್ತಾರೆ. ಗೆಳೆತನದ ಮೂಲಗುಣ ತಪ್ಪುದಾರಿ ತುಳಿಯದಂತೆ ತಡೆಯುವುದು. ಇದೇ ನಿಜವಾದ ಸ್ನೇಹದ ಲಕ್ಷಣ. ಅಲ್ಲದೆ ತಾನು ರಾಣಿಯ ನೈತಿಕ ಬಾಧ್ಯತೆಗಳ ಕಡೆ ಗಮನ ಹರಿಸಬೇಕಾದ ಅಗತ್ಯವೂ ಇತ್ತು. ಇಲ್ಲಿ ದೂದವಿಗೆ ಅಮೃತಮತಿ ಸಖಿಯೂ ಹೌದು. ಅಂತೆಯೆ ಆ ರಾಜ್ಯದ ರಾಜನ ಪಟ್ಟದರಸಿಯೂ ಹೌದು. ಹಾಗಾಗಿ ತನ್ನ ಸಖಿಯಾಗಲಿ, ರಾಜ್ಯದ ಪಟ್ಟದರಸಿಯಾಗಲಿ ಸಮಾಜದ ಎದುರು ಅವಮಾನದ ಪಾಲಾಗಬಾರದು ಎಂಬ ಉದ್ದೇಶದಿಂದ ಈ ರೀತಿಯಾದ ಕನಿಷ್ಠವಾಗಿ ಭಾವಿಸುವ ಕಲ್ಪಿತ ಕತೆಯನ್ನು ಹೆಣೆದು ಅವಳನ್ನು ಈ ಸಂಬಂಧದಿಂದ ವಿಮುಖಳನ್ನಾಗಿಸುವ ಪ್ರಯತ್ನ ಮಾಡಿದಳು. ಅದು ಸಫಲವಾಗಲಿಲ್ಲ. ಅದು ಬೇರೆ ವಿಚಾರ. ಆದರೆ ಅಂಥದ್ದೊಂದು ಪ್ರಯತ್ನ ಮಾಡಿದಳೆನ್ನುವುದು ಮುಖ್ಯ ಸಂಗತಿ.